# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ

## 2012 - 2013 ನೇ ಸಾಲಿನ ವಾರ್ಷಿಕ ವರದಿ.

**ಚಿಕ್ಕಮಗಳೂರು ನಗಾರಭಿವೃದ್ಧಿ ಪ್ರಾಧಿಕಾರದ 2012 - 2013 ನೇ ಸಾಲಿನ**
**01-04-2011 ರಿಂದ 31-03-2012 ಮತ್ತು 01-04-2012 ರಿಂದ 31-12-2012 ರವರೆಗಿನ**

## :.:.: ವಾರ್ಷಿಕ ವರದಿ :.:.:

### 1. 2012 - 2013 ನೇ ಸಾಲಿನ ಆಯವ್ಯಯ ಅಂದಾಜು ಮತ್ತು ಅದಕ್ಕನುಗುಣವಾಗಿ ವೆಚ್ಚ

| ಆದಾಯ | ಖರ್ಚು |
|---|---|
| ರೂ. 66,50,36.842=00 | ರೂ. 62,88,61,000=00 |

**01-04-2011 ರಿಂದ 31-03-2012 ರವರೆಗಿನ ಆದಾಯ ಮತ್ತು ಖರ್ಚಿನ ವಿವರ**

| ಆದಾಯ | ಖರ್ಚು |
|---|---|
| ರೂ. 2,70,68,781=00 | ರೂ. 2,34,59,699=00 |

### 2. ಬೇಡಿಕೆ, ವಸೂಲಿ ಮತ್ತು ಬಾಕಿ ಪಟ್ಟಿ ( ಡಿ. ಸಿ. ಬಿ.)

–ಇಲ್ಲಾ–

### 3. 01-04-2011 ರಿಂದ 31-03-2012 ರವರೆಗಿನ ಪ್ರಗತಿಯ ವರದಿ

**ಈ ಮುಂದಿನಂತೆ ಕಾಮಗಾರಿಗಳನ್ನು ನಿರ್ವಹಿಸಲಾಗಿರುತ್ತದೆ.**

1. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ (ಹೆಚ್ಚುವರಿ ವಸತಿ ಬಡಾವಣೆ) ಆರ್.ಸಿ.ಸಿ. ಡೆಕ್ ಸ್ಲ್ಯಾಬ್ ಮೋರಿ ಕಾಮಗಾರಿ.
2. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ (ಹೆಚ್ಚುವರಿ ವಸತಿ ಬಡಾವಣೆ) ಬಿ. ಎಸ್. ಸ್ಲ್ಯಾಬ್ ಡ್ರೈನ್ ನಿರ್ಮಾಣ ಕಾಮಗಾರಿ.
3. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ (ಹೆಚ್ಚುವರಿ ವಸತಿ ಬಡಾವಣೆ) ಬಿ. ಎಸ್. ಸ್ಲ್ಯಾಬ್ ಡ್ರೈನ್ ನಿರ್ಮಾಣ ಕಾಮಗಾರಿ.
4. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯಲ್ಲಿ (ಹೆಚ್ಚುವರಿ ವಸತಿ ಬಡಾವಣೆ) ಬಿ. ಎಸ್. ಸ್ಲ್ಯಾಬ್ ಡ್ರೈನ್ ನಿರ್ಮಾಣ ಕಾಮಗಾರಿ.

**ಆರ್ಥಿಕ ಪ್ರಗತಿಯ ವಿವರಗಳು**

| | |
|---|---|
| 1. ಕಲ್ವರ್ಟ್ ನಿರ್ಮಾಣ ಕಾಮಗಾರಿಗೆ | 1,03,775=00 |
| 2. ಚರಂಡಿ ನಿರ್ಮಾಣ ಕಾಮಗಾರಿಗೆ | 6,83,459=00 |
| ಒಟ್ಟು | **7,87,234=00** |

ಪುಟ –2– ಕ್ಕೆ

**<u>01-04-2012 ರಿಂದ 31-12-2012 ರವರೆಗಿನ ಪ್ರಗತಿಯ ವರದಿ.</u>**

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಕೆ. ಎಂ. ರಸ್ತೆಯ ರಾಂಪುರದ ಹತ್ತಿರ ಹಾಗೂ ಶ್ರೀ ಕಣಿವೇ ರುದ್ರೇಶ್ವರ ದೇವಸ್ಥಾನದ ಹತ್ತಿರ ಮತ್ತು ಬಿಳೀಕೆರೆ ತರೀಕೆರೆ ರಸ್ತೆಯ ಗಾಲ್ಫ್ ಕ್ಲಬ್ ಹತ್ತಿರ ಹಾಗೂ ಹಿರೇಮಗಳೂರು ಹತ್ತಿರ ಒಟ್ಟು ನಾಲ್ಕು ಸ್ವಾಗತ ಕಮಾನು ನಿರ್ಮಾಣ ಕಾಮಗಾರಿ. ರೂ.30,76,000=00.
2. ಚಿಕ್ಕಮಗಳೂರು ನಗರದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದ ಮುಂಭಾಗದಲ್ಲಿ ಹೈಟೆಕ್ ಆಟೋ ನಿಲ್ದಾಣ ನಿರ್ಮಾಣ ಕಾಮಗಾರಿ. ರೂ.10,00,000=00.
3. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿ ಸುತ್ತಲು ಇಂಟರ್ ಲಾಕ್ ನಿರ್ಮಿಸಿ ಅಭಿವೃದ್ಧಿಪಡಿಸುವ ಕಾಮಗಾರಿ. ರೂ. 7,95,000=00.
4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯಲ್ಲಿ ನಾಲ್ಕು ಹಂತಗಳಲ್ಲಿ ಹಾಗೂ ಕಛೇರಿ ಮುಂಭಾಗದಲ್ಲಿ ಎಂ. ಎಸ್. ಪ್ಲೇಟ್ ನಾಮಫಲಕ ಸರಬರಾಜು ಮಾಡಿ ಅಳವಡಿಸುವ ಕಾಮಗಾರಿ. ರೂ. 3,35,615=00.
5. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆ ಹಾಗೂ ರತ್ನಗಿರಿ ಬೋರೆ ಹತ್ತಿರ ಎರಡು ಉದ್ಯಾನವನ ಅಭಿವೃದ್ಧಿಪಡಿಸುವ ಕಾಮಗಾರಿ. ರೂ. 5,00,000=00.
6. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಉಪ್ಪಳ್ಳಿ ಇಂದಾವರ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿ ನಿರ್ಮಾಣ ಮಾಡುತ್ತಿರುವ ಶ್ರೀ ಎ. ಬಿ. ವಾಜಪೇಯಿ ವಸತಿ ಬಡಾವಣೆಯ ಯೋಜನಾ ವರದಿಗಾಗಿ (ಶ್ರೀ ವಾಸ್ತುಶಿಲ್ಪಾ ಕನ್ಸಲ್ಟೆಂಟ್ ಬೆಂಗಳೂರು) ರೂ.25,45,000=00.
7. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಉಪ್ಪಳ್ಳಿ ಇಂದಾವರ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿ ನಿರ್ಮಾಣ ಮಾಡುತ್ತಿರುವ ಶ್ರೀ ಎ. ಬಿ. ವಾಜಪೇಯಿ ವಸತಿ ಬಡಾವಣೆಯ ಅಂದಾಜು ಪಟ್ಟಿ ಅನುಮೋದನೆಗಾಗಿ ಶುಲ್ಕ ಪಾವತಿ. <u>ರೂ.63,55,500=00.</u>

**ಒಟ್ಟು <u>ರೂ.1,50,37,181=00</u>.**

## 4. <u>ತೆಗೆದುಕೊಳ್ಳಲು ಉದ್ದೇಶಿಸಿರುವ ಕಾರ್ಯಕ್ರಮಗಳು:-</u>

1. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕೆ.ಹೆಚ್.ಬಿ. ಬಡಾವಣೆಯ ಶ್ರೀ ಗಣಪತಿ ದೇವಸ್ಥಾನದ ಮುಂಭಾಗದಲ್ಲಿ ಉದ್ಯಾನವನ ಅಭಿವೃದ್ಧಿಪಡಿಸುವ ಕಾಮಗಾರಿ ಪೂರ್ಣಗೊಂಡಿದ್ದು ರೂ. 10.00 ಲಕ್ಷಗಳ ಬಿಲ್ಲು ಪಾವತಿಸಬೇಕಾಗಿರುತ್ತದೆ.
2. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಜಯನಗರ ಬಡಾವಣೆಯ ಉದ್ಯಾನವನ ಅಭಿವೃದ್ಧಿಪಡಿಸಿರುವ ರೂ. 6.50 ಲಕ್ಷಗಳ ಕಾಮಗಾರಿಯು ಪೂರ್ಣಗೊಂಡಿದ್ದು ಬಿಲ್ಲು ಪಾವತಿಸಬೇಕಾಗಿರುತ್ತದೆ.
3. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಿಜಯಪುರ ಬಡಾವಣೆಯ ಜನರಲ್ ಕಾರ್ಯಪ್ಪ ಉದ್ಯಾನವನ್ನು ರೂ. 4.90 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಕಾಮಗಾರಿಯು ಪೂರ್ಣಗೊಂಡಿದ್ದು ಬಿಲ್ಲು ಪಾವತಿಸಬೇಕಾಗಿರುತ್ತದೆ.
4. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ರಾಮನಹಳ್ಳಿ ಬಡಾವಣೆಯಲ್ಲಿನ ಉದ್ಯಾನವನ್ನು ರೂ. 9.00 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ ಕಾಮಗಾರಿ ಪೂರ್ಣಗೊಂಡ ನಂತರ ಬಿಲ್ಲು ಪಾವತಿಸಬೇಕಾಗಿರುತ್ತದೆ.
5. ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯಲ್ಲಿನ ಶ್ರೀ ಬಸವೇಶ್ವರ ಉದ್ಯಾನವನ್ನು ರೂ. 9.85 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ಧಿಪಡಿಸಿರುವ ಕಾಮಗಾರಿಯು ಪೂರ್ಣಗೊಂಡಿದ್ದು ಬಿಲ್ಲು ಪಾವತಿಸಬೇಕಾಗಿರುತ್ತದೆ.

**ಪುಟ 3 ಕ್ಕೆ**

6. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವತಿಯಿಂದ ಉಪ್ಪಳ್ಳಿ ಬಡಾವಣೆಯ ಕಲುದೊಡ್ಡಿ ಹತ್ತಿರ ಬಸ್ ತಂಗುದಾಣಕ್ಕಾಗಿ ರೂ. 4.00 ಲಕ್ಷಗಳ ವೆಚ್ಚದಲ್ಲಿ ಅಭಿವೃದ್ದಿಪಡಿಸಿರುವ ಕಾಮಗಾರಿಯು ಪೂರ್ಣಗೊಂಡಿದ್ದು ಬಿಲ್ಲು ಪಾವತಿಸಬೇಕಾಗಿರುತ್ತದೆ.
7. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದಿಂದ ಅಭಿವೃದ್ದಿಪಡಿಸುತ್ತಿರುವ ಶ್ರೀ ಎ. ಬಿ. ವಾಜಪೇಯಿ ವಸತಿ ಬಡಾವಣೆಯನ್ನು ರೂ. 160.89 ಕೋಟಿ ವೆಚ್ಚದಲ್ಲಿ ಅಭಿವೃದ್ದಿಪಡಿಸುತ್ತಿರುವ ಕಾಮಗಾರಿಗೆ ಮೆ., ಎನ್.ಸಿ.ಸಿ. ಕಂಪನಿ ಲಿ., ಬೆಂಗಳೂರು ರವರಿಗೆ ವಹಿಸಿದ್ದು ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

## 5. <u>ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಕಾರ್ಯಕ್ರಮಗಳ ಪ್ರಗತಿ.</u>

ಇದು ಪ್ರಾಧಿಕಾರದ ವ್ಯಾಪ್ತಿಗೆ ಬರುವುದಿಲ್ಲ. ಆದರೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ (ನಿವೇಶನ ಹಂಚಿಕೆ) ನಿಯಮ–1991 ರ, ಅನ್ವಯ ನಿವೇಶನ ಹಂಚಿಕೆ ಸಮಯದಲ್ಲಿ ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ರಿಯಾಯಿತಿ ದರದಲ್ಲಿ ನಿವೇಶನ ಹಂಚಿಕೆ ಮಾಡಿ ನಿಯಮದಂತೆ ಮೀಸಲಿಡಲು ಕ್ರಮ ಕೈಗೊಳ್ಳಲಾಗಿದೆ, ಆಯ್ಕೆಯ ಯಾವುದೇ ಅಂತಿಮ ಪಟ್ಟಿ ಆಗಿರುವುದಿಲ್ಲ.

## 6. <u>ವಿಶೇಷ ಘಟಕ ಯೋಜನೆ : ಗಿರಿಜನ ಅಭಿವೃದ್ಧಿ ಯೋಜನೆಗಳ ವಿವರಗಳು.</u>

ಇದು ಪ್ರಾಧಿಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ,

## 7. <u>ಕೇಂದ್ರ ಪುರಸ್ಕೃತ : ವಿದೇಶಿ ನೆರವಿನ ಯೋಜನೆಗಳ ವಿವರಗಳು</u>

ಪ್ರಾದಿಕಾರಕ್ಕೆ ಕೇಂದ್ರದಿಂದ ಪುರಸ್ಕೃತ ಯೋಜನೆ ಇರುವುದಿಲ್ಲ ಹಾಗೂ ಯಾವುದೇ ಯೋಜನೆಗಳಿಗೆ ಕೇಂದ್ರದ ನೆರವು ದೊರಕಿರುವುದಿಲ್ಲ.

## 8. <u>ಇತರೆ ಯೋಜನೆಗಳ ವಿವರಗಳು</u>

ಚಿಕ್ಕಮಗಳೂರು ನಗರದ ಮಹಾ ಯೋಜನೆ (ಪರಿಷ್ಕೃತ) (ಸಿ. ಡಿ. ಪಿ.) ನಕ್ಷೆಗೆ ಸರ್ಕಾರವು ಅಂತಿಮ ಅನುಮೋದನೆ ನೀಡಿದ್ದು, ಅದರಂತೆ ಕಾರ್ಯನಿರ್ವಹಣೆ ನಡೆಯುತ್ತದೆ.

# ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ದಿನಾಂಕ: 01-01-2013 ರಿಂದ 31-03-2013 ರವರೆಗೆ ತೆಗೆದುಕೊಳ್ಳಲು ಉದ್ದೇಶಿಸಿರುವ ಅಭಿವೃದ್ಧಿ ಯೋಜನೆಗಳ ವಿವರ:

1. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಉಪ್ಪಳ್ಳಿ ಇಂದಾವರ ಗ್ರಾಮದ ವಿವಿದ ಸರ್ವೆ ನಂಬರುಗಳಲ್ಲಿ 40 : 60 ರ ಯೋಜನೆಯಡಿ ವಸತಿ ಬಡಾವಣೆ ಅಭಿವೃದ್ದಿಗಾಗಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಮೆ., ಎನ್.ಸಿ.ಸಿ. ಕಂಪನಿ ಲಿ., ಬೆಂಗಳೂರು ರವರಿಗೆ ಕಾಮಗಾರಿ ನಿರ್ವಹಿಸಲು ಕಾರ್ಯಾದೇಶ ನೀಡಲಾಗಿದೆ. ಕಾಮಗಾರಿಯು ಪ್ರಗತಿಯಲ್ಲಿದ್ದು ನಿವೇಶನ ಹಂಚಿಕೆ ಮಾಡುವ ಸಲುವಾಗಿ ನಿಯಮಾನುಸಾರ ಸಾರ್ವಜನಿಕರಿಂದ ಅರ್ಜಿ ಆಹ್ವಾನಿಸಲಾಗಿದೆ, 2013 - 14 ನೇ ಸಾಲಿನಲ್ಲಿ ಸದರಿ ಬಡಾವಣೆ ರಚನೆಯಿಂದ ಆದಾಯ ಸುಮಾರು ರೂ. 185.00 ಕೋಟಿಗಳಾಗಲಿದ್ದು ಬಡಾವಣೆ ರಚನೆಗೆ ಸುಮಾರು ರೂ. 163.00 ಕೋಟಿ ಖರ್ಚು ಆಗಬಹುದಾಗಿರುತ್ತದೆ. ಬಡಾವಣೆ ರಚನೆಯಿಂದ ಸುಮಾರು ರೂ. 12.00 ಕೋಟಿ ನಿವ್ವಳ ಆದಾಯ ನಿರೀಕ್ಷಿಸಲಾಗಿದೆ.

ಪುಟ 4 ಕ್ಕೆ

2. ಚಿಕ್ಕಮಗಳೂರು ನಗರದ ಮಹಾಯೋಜನೆ ನಕ್ಷೆಯಲ್ಲಿ (ಸಿ.ಡಿ.ಪಿ. ನಕ್ಷೆಯಲ್ಲಿ) ಗುರುತಿಸಿರುವ ಮುಖ್ಯವಾದ 60 ಅಡಿ ರಸ್ತೆಗಳನ್ನು ಸಾರ್ವಜನಿಕರು ಮತ್ತು ಪ್ರಾಧಿಕಾರದ ಜಂಟಿ ಯೋಜನೆಯಲ್ಲಿ ನಿರ್ವಹಿಸಲು ಯೋಜಿಸಲಾಗಿದೆ.

3. ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಹಿರೇಮಗಳೂರು ಹೆಚ್ಚುವರಿ ವಸತಿ ಬಡಾವಣೆಯಲ್ಲಿ ರೂ. 28.76 ಲಕ್ಷಗಳ ವೆಚ್ಚದಲ್ಲಿ ಚಪ್ಪಡಿ ಚರಂಡಿ ಕಾಮಗಾರಿ, ರೂ. 64.06 ಲಕ್ಷ ರೂ ವೆಚ್ಚದಲ್ಲಿ ಸೈಜುಕಲ್ಲು ಬಾಕ್ಸ್ ಚರಂಡಿ ಕಾಮಗಾರಿ ಹಾಗೂ ರೂ. 35.30 ಲಕ್ಷ ರೂ. ಗಳಲ್ಲಿ ಆರ್. ಸಿ. ಡೆಕ್ ಸ್ಲ್ಯಾಬ್ ಮತ್ತು ಆರ್.ಸಿ.ಸಿ. ಹ್ಯೂಂ ಪೈಪ್ ಮೋರಿ ನಿರ್ಮಾಣ ಕಾಮಗಾರಿ ಮತ್ತು ರೂ.50.20 ಲಕ್ಷಗಳ ವೆಚ್ಚದಲ್ಲಿ ರಸ್ತೆ ಕಾಮಗಾರಿಗಳು ತೀವ್ರ ಪ್ರಗತಿಯಲ್ಲಿದ್ದು, ಭಾಗಶಃ ಬಿಲ್ಲುಗಳು ಪಾವತಿಯಾಗಿದ್ದು, ಅಂತಿಮ ಬಿಲ್ಲುಗಳು ಮಾತ್ರ ಪಾವತಿಯಾಗಬೇಕಾಗಿರುತ್ತದೆ.

4. ಹಿರೇಮಗಳೂರು ಹೆಚ್ಚುವರಿ ವಸತಿ ಬಡಾವಣೆಯಲ್ಲಿನ 17 ಎಕರೆ 37 ½ ಗುಂಟೆ ಪ್ರದೇಶದಲ್ಲಿನ 3 - 4 ಜನ ಭೂ ಮಾಲೀಕರು ಘನ ಉಚ್ಛನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿ ತಡೆಯಾಜ್ಞೆ ತಂದಿರುವ ಕಾರಣ ತೆರವುಗೊಳಿಸುವ ಬಗ್ಗೆ ತೀವ್ರ ಕ್ರಮ ವಹಿಸಲಾಗುತ್ತಿದೆ. ತೆರವುಗೊಂಡ ನಂತರ ಪೂರ್ಣವಾಗಿ ಬಡಾವಣೆ ರಚನೆ ಕಾರ್ಯ ಪೂರ್ಣಗೊಳಿಸಿ ಹಂಚಿಕೆಗೆ ಕ್ರಮ ತೆಗೆದುಕೊಳ್ಳಲಾಗುವುದು.

5. ಚಿಕ್ಕಮಗಳೂರು ನಗರದ ಮಧ್ಯಭಾಗದಲ್ಲಿರುವ ಬಸವನಹಳ್ಳಿ ಕೆರೆಯ ಮಧ್ಯಭಾಗದಲ್ಲಿ ಜಿಲ್ಲಾಡಳಿತ ವತಿಯಿಂದ ದ್ವೀಪವನ್ನು ನಿರ್ಮಿಸಲಾಗಿದೆ, ನಗರಾಭಿವೃದ್ದಿ ಪ್ರಾಧಿಕಾರವು ಸದರೀ ದ್ವೀಪಕ್ಕೆ ಹೋಗಲು ಒಂದು ತೂಗುಸೇತುವೆ ನಿರ್ಮಾಣ ಮಾಡಿ ದ್ವೀಪದಲ್ಲಿ ವಿವೇಕನಂದ ಸ್ಮಾರಕ ನಿರ್ಮಾಣ ಮಾಡಿ ಸಾರ್ವಜನಿಕ ಮನರಂಜನೆ ಮತ್ತು ಪ್ರೇಕ್ಷಣೀಯ ಸ್ಥಳವನ್ನಾಗಿ ಅಭಿವೃದ್ದಿಪಡಿಸಲು ಉದ್ದೇಶಿಸಲಾಗಿದೆ.

6. ಪ್ರಾದಿಕಾರದ ವ್ಯಾಪ್ತಿಯಲ್ಲಿನ ಉದ್ಯಾನವನಗಳನ್ನು ಅಭಿವೃದ್ದಿಪಡಿಸಿ ಸಾರ್ವಜನಿಕ ಉಪಯೋಗಕ್ಕಾಗಿ ಒದಗಿಸುವುದು.

7. ಪ್ರಾಧಿಕಾರ ಕಛೇರಿಗೆ ಈಗಾಗಲೇ ತಳಪಾಯ ಮಾಡಿರುವ ಜಾಗದಲ್ಲಿ ಒಂದು ಹೆಚ್ಚುವರಿ ಕೊಠಡಿ ನಿರ್ಮಾಣ ಹಾಗೂ ಆಯುಕ್ತರ ವಸತಿ ಗೃಹದ ವಿಶೇಷ ದುರಸ್ಥಿಗೊಳಿಸುವುದು.

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.